ಮಳೆಗಾಲದಲ್ಲಿ ಕೊಡೆ ಇಲ್ಲದವರು ಇಲ್ಲಿ ಓಡಿ ಬಂದು ನಿಲ್ಲುವುದು, ಬೇಸಿಗೆಯಲ್ಲಿ ತಂಪು ನೆರಳಿಗೆಂದು ತಲೆ ಕೊಡುವವರು. ಹೀಗೆ ಸಮಸ್ತವೂ ಇಲ್ಲಿ ಒಂದು ಪ್ರಪಂಚವನ್ನೇ ಸೃಷ್ಟಿಸಿತ್ತು. ಈ ಎಲ್ಲ ಸೃಷ್ಟಿಗೆ ಕಾರಣವಾಗಿತ್ತು ನಂಜಲ.

ಈ ನಂಜಲ ಮರ ಈ ಜಾಗಕ್ಕೊಂದು ಚೆಂದ ಅನ್ನುವವರುಂಟು. ಅಷ್ಟೇ ಅಲ್ಲ, ಒಂದು ಶೋಭೆ. ಒಂದು ಲಕ್ಷಣ. ಅಲ್ಲಿ ಸುತ್ತಮುತ್ತ ಹೇಳಿಕೊಳ್ಳುವ ಹಸಿರು ಇಲ್ಲ, ಹತ್ತಿರದಲ್ಲಿ ಇರುವ ಹತ್ತಾರು ಅಂಗಡಿ, ಮನೆ, ಹೋಟೆಲು, ಕಟ್ಟಡ ಬಿಲ್ಡಿಂಗು ಎಲ್ಲ ಬಿಸಿಬಿಸಿಯಾಗಿ ಹೊಗೆಯಾಡುತ್ತಿರುವಾಗ ಈ ಹಸಿರೇ ತಂಪು ತಂಪು. ಈ ಊರಿನಿಂದ ಬೇರೆ ಊರುಗಳಿಗೆ ಮದುವೆಯಾಗಿ ಹೋದ ಹುಡುಗಿಯರೆಲ್ಲ ಈ ಮರವನ್ನ ನೆನಪಿಸಿಕೊಳ್ಳುತ್ತಾರೆ. ಏಕೆಂದರೆ, ಇಂತಹ ಒಂದು



ಮರ ಅವರ ಗಂಡಂದಿರ ಊರಲ್ಲಿ ಇಲ್ಲ. ಈ ವಿಷಯಕ್ಕೆ ಬಂದರೆ ಇದು ಮರವಲ್ಲ, ಅವರ ಪಾಲಿಗೆ ತೌರಿನ ಶ್ರೀಮಂತಿಕೆ.

ಹಿಂದೊಂದು ಕಾಲದಲ್ಲಿ ಈ ಮರ 'ಗಾಡಿ ಬಿಡ್ಡಿ' ಎಂದೇ ಹೆಸರುವಾಸಿ. ಇದು ಉತ್ತರ ಕನ್ನಡ ಜಿಲ್ಲೆಯ ಭಾಷೆ. ಬಿಡ್ಡಿ ಎಂದರೆ ಬಿಡುವ ಸ್ಥಳ, ಗಾಡಿ ಬಿಡುವ ಸ್ಥಳ. ಸಂತೆಯ ದಿನ, ಜಾತ್ರೆಯ ದಿನ ಇಲ್ಲಿ ನೂರಾರು ಗಾಡಿಗಳು. ಎತ್ತುಗಳು, ಒಲೆ ಹೂಡಿ ಅಡುಗೆ ಮಾಡುವವರು. ಈ ಊರಿನ ಮೂಲಕ ಹಾದುಹೋಗುವ ಎಲ್ಲ ಗಾಡಿಗಳೂ ಇಲ್ಲಿ ನಿಲ್ಲಲೇಬೇಕು. ಈಗ ಗಾಡಿಗಳಿಲ್ಲ. ಜನರಿಗೆ ಅದರ ನೆನಪೂ ಇಲ್ಲ. ಇಲ್ಲಿ ಜನ ಮರೆತಿರುವ ಮತ್ತೂ ಒಂದು ವಿಷಯ ಇದೆ. 1900ರಲ್ಲಿ ಮೈಸೂರಿನ ದೊರೆ ಒಡೆಯರ್ ಜೋಗದ ಕಾಮಗಾರಿ ವೀಕ್ಷಿಸಲು ಇಲ್ಲಿಗೆ ಬರುವ ಮುನ್ನ ಪರಿವೀಕ್ಷಣೆಗೆ ದಿವಾನ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಮೊದಲು ಇಲ್ಲಿಗೆ ಬಂದು ಪೊಲೀಸ್ ಸ್ಟೇಷನ್ ಮುಂದೆ ನಂಜಲು ಮರದ ಸಸಿಯನ್ನು ಇಲ್ಲಿ ನೆಟ್ಟಿದ್ದರಂತೆ. ಕೆಲ ದಿನ ಪುರಸಭೆಯವರು ಈ ಸಸಿಗೆ ನೀರು ಹಾಕಿ ನೋಡಿಕೊಂಡರು. ನಂತರ ಮರ ದೊಡ್ಡದಾದ ಮೇಲೆ ಅವರೂ ಮರೆತರು, ಜನರೂ ಮರೆತರು. ಯಾರೇ ಮರೆಯಲಿ ನೆನಪಿಟ್ಟುಕೊಳ್ಳಲಿ ಮರ ಮಾತ್ರ ಬೆಳೆದಿದೆ, ದಷ್ಟಪುಷ್ಟವಾಗಿ ಬೆಳೆದು ನಿಂತಿದೆ, ಅದು ಯಾವುದಕ್ಕೆಲ್ಲ, ಯಾರ್‍ಯಾರಿಗೆಲ್ಲ ಆಶ್ರಯ ನೀಡಿದೆ ಎಂಬುದನ್ನ ನಾನು ಈಗಾಗಲೇ ಹೇಳಿದ್ದೇನೆ. ಹಲವಾರು ರೆಂಬೆಕೊಂಬೆಗಳನ್ನ ಚಾಚಿಕೊಂಡು ಬಲವಾಗಿ ಕಾಲೂರಿ ನಿಂತ ಈ ಮರ ಹಲವರ ಪಾಲಿಗೆ ಒಂದು ಅಚ್ಚರಿ.

ಮರದ ವಿಶೇಷವನ್ನ ಮತ್ತೂ ಹೇಳುವುದಾದರೆ....

ಈ ನಂಜಲು ಮರದ ಕೆಳಗೆ ಒಂದು ಕಟ್ಟೆ ಇದೆ. 'ದಸರೆ ಕಟ್ಟೆ' ಎಂದು ಜನ ಕರೆಯುತ್ತಾರೆ. ದಸರೆಯ ದಿನ ಗುಡಿಯಿಂದ ಹೊರಟ ದೇವರು, ಇಲ್ಲಿಯವರೆಗೆ ಬಂದು, ಒಂದು ಗಂಟೆ ಇಲ್ಲಿ ಕುಳಿತು ಪೂಜೆ ಮುಗಿಸಿಕೊಂಡು ಹೋಗುವುದು ಒಂದು ಪದ್ಧತಿ. ಒಂದೆರಡು ವರ್ಷ ಏನೇನೋ ಕಾರಣದಿಂದಾಗಿ ಗುಡಿಯಿಂದ 'ದೇವರು' ಹೊರಡಲಿಲ್ಲ, ಈ ಕಟ್ಟೆಗೆ ದೇವರು ಬಂದು ಕೂರಲಿಲ್ಲ. ಆ ವರ್ಷ ಊರಿಗೆ ಒಳಿತಾಗಲಿಲ್ಲ ಎಂಬುದೊಂದು ನಂಬಿಕೆ. ಈಗೀಗ ಜನ ಇಲ್ಲಿ ದಸರೆ ಮಾಡುವುದನ್ನು ಮರೆತಿಲ್ಲ.

ಹಾಗೆಯೇ ಊರಿನಲ್ಲಿ ಇರುವ ಕೆಲವು ಜನಾಂಗದವರು ಮದುವೆಯ ಸಂದರ್ಭದಲ್ಲಿ ವಧುವರರನ್ನ ಇಲ್ಲಿಯವರೆಗೆ ಕರೆತಂದು, ಇಲ್ಲಿ ಕೂರಿಸಿ, ಪಕ್ಕದ ಮೈದಾನದ ಮೇಲೆ ಒಂದು ಗಂಟೆ ಮದ್ದು ಸುಡುವುದು ಎಂದೆಲ್ಲ ಗೌಜಿಗದ್ದಲ ಮಾಡುವುದುಂಟು. ಹಾಗೆಯೇ ಈ ಊರಿನ ಹೆಣ್ಣುಮಗಳು ತಾನು ಹೆತ್ತ ಮೊದಲ ಮಗುವನ್ನು ತಂದು ಈ ಕಟ್ಟೆಯ ಮೇಲೆ ಮಲಗಿಸಿ ಆ ಮಗುವಿಗೆ ದೀರ್ಘಾಯುಸ್ಸನ್ನು ಕೇಳುವದೂ ಉಂಟು. ಇದೊಂದು ನಂಬಿಕೆ, ಈ ಮರದ ಸುತ್ತ ಇಂತಹ ನಂಬಿಕೆಗಳು ನೂರು.

ಇಷ್ಟೇ ಅಲ್ಲ...

ಪೊಲೀಸ್‌ನವರು ಸೀಸ್ ಮಾಡಿದ ವಾಹನ ತಂದು ಇಲ್ಲಿ ನಿಲ್ಲಿಸಿದ್ದಾರೆ. ಸಂಬಂಧಪಟ್ಟವರು ಆಗಾಗ್ಗೆ ಬಂದು ತಮ್ಮ ವಾಹನ ನೋಡಿಕೊಂಡು ಹೋಗುತ್ತಾರೆ. ದಿನದಲ್ಲಿ ಎರಡು ಬಾರಿಗೆ ರೈಲಿಗೆ ಹೋಗುವವರಿಗೆ ಯಾವುದಕ್ಕೂ ಇದು ಮರೆಯಬಾರದ ದಾರಿ. ಬಹಳ ದೂರದಿಂದ ನಾನಿಲ್ಲಿ ಇದ್ದೇನೆ ಅನ್ನುತ್ತೆ ಈ ಮರ. ನಿವೃತ್ತ ಕಾನ್‌ಸ್ಟೆಬಲ್ ಫ್ರಾನ್ಸಿಸ್ ಇನ್ನೇನು ನಿವೃತ್ತನಾಗಬೇಕು ಅನ್ನುವಾಗ ಕೆಲಸ ಕಳೆದುಕೊಂಡ. ಅವನು ಬದುಕಲಿ ಎಂದು ಡಿಪಾರ್ಟ್‌ಮೆಂಟಿನವರೇ ಅವನಿಗೆ ಅಂಗಡಿ ಇಡಲು ಅನುಮತಿ ನೀಡಿದರು, ಅವನಿಲ್ಲಿ ಬದುಕಿದ್ದಾನೆ. ಪೀರ್ ಸಾಬಿಗೂ ಪೊಲೀಸರಿಗೂ ನಂಟು. ಅವನ ಪಂಕ್ಚರ್ ಅಂಗಡಿ ಅಲ್ಲಿದೆ. ಹೂವಿನ ಚಂದ್ರಮ್ಮ ಬೆಳಗ್ಗೆ ಕೆಲ ವರ್ತನೆ ಮನೆಗಳಿಗೆ ಹೂ ಕೊಟ್ಟು ಸಂಜೆ ಐದರ ತನಕ ಇಲ್ಲಿ ಕೂತು ಹೂ ಮಾರುತ್ತಾಳೆ. ಮಿರಾಂಡ ಬಿಳಿ ಟವಲ್ ಹಾಸಿಕೊಂಡು ಕುಳಿತು ಜನರಿಂದ ಭಿಕ್ಷೆ ಬೇಡುವುದು ಇಲ್ಲಿಯೇ. ಹತ್ತಿರದ ಮೀನಾಕ್ಷಿ ಭವನದ ದುರ್ಗಪ್ಪನ ಬೆಂಬಲ ಇವನಿಗೆ. ಸಂಜೆ ಐದರಿಂದ ಏಳರವರೆಗೆ ಕಳ್ಳೇಕಾಯಿ ವ್ಯವಹಾರ ಬಸ್ಸುವಿನದು ಇಲ್ಲಿ. ಚಪ್ಪಲಿ ಮಾದೇವ ತನ್ನ ಪರಿಕರದ ಜೊತೆ ಕೂರುವುದು ಕೂಡ ಇಲ್ಲಿಯೇ. ಹತ್ತಿರದ ಶಾಲಾಮಕ್ಕಳಿಗೆ ವರ್ಷದ ಕೆಲ ದಿನಗಳಲ್ಲಿ ಮೊದಲು ಹೂ ನೀಡಿ ನಂತರ ಮರದಿಂದ ರುಚಿಕರವಾದ ನಂಜಬಟ್ಟಲು ಎಂಬ ಸಣ್ಣ ಹಣ್ಣು ನೀಡುತ್ತದೆ ಮರ. ಈ ಹಣ್ಣನ್ನ ಆಯಲು ಹೋದ ಮಕ್ಕಳು ಶಾಲೆ ತಪ್ಪಿಸಿಕೊಳ್ಳುತ್ತಾರೆ ಎಂದು ಶಾಲಾ ಮಾಸ್ತರರು ಗದ್ದಲ ಎಬ್ಬಿಸಿ, ಮಕ್ಕಳ ಕಿಸೆಯಿಂದ ಹಣ್ಣು ಎಗರಿಸಿ ಹೆಂಡತಿಗೆ ಒಯ್ದು ನೀಡುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಹಣ್ಣು ಎಲ್ಲರಿಗೂ ಸಿಹಿಸಿಹಿ.

ಮಳೆಗಾಲದಲ್ಲಿ ಮರದ ಕೆಳಗೆ ಬಂದು ನಿಂತರೆ, ತಲೆಯ ಮೇಲೆ ಅಮ್ಮನ ಸೆರಗು, ಬೇಸಿಗೆಯಲ್ಲಿ ತಂಪಾದ ನೆರಳು. ಹಕ್ಕಿ ಪಕ್ಕಿ ಹಾಡು. ಇದರ ಪೊಟರೆಯಲ್ಲಿ ಹಾವು ಮುಂಗುಸಿ ಅಳಿಲಿನ ಆಟ... ಆ ಪ್ರದೇಶ ಈ ನಂಜಲ ಮರದ ಕೃಪೆಯಲ್ಲಿ ಏನೆಲ್ಲ ಪಡೆದಿದೆ ಎಂಬುದು ಒಂದು ಅಚ್ಚರಿ.

ಮೊನ್ನೆ ಮರ ಕಡಿಯುವ ಮಹದೇವ, ರಸ್ತೆ ಅಗಲ ಮಾಡುವ ಶರೀಫ, ತಮ್ಮ ತಮ್ಮ ಕೆಲಸಗಾರರನ್ನ ಇರಿಸಿಕೊಂಡು ಇಲ್ಲಿ ನಿಂತು ನಂಜಲ ಮರವನ್ನ ನೋಡುತ್ತಿದ್ದರು ಅನ್ನುವುದು ಒಂದು ಗುಸುಗುಸು ಸುದ್ದಿ. ಹಾಗೆಂದು ಊರಿನಲ್ಲಿ ಇದು ಭಾರೀ ಸುದ್ದಿ ಏನೂ ಆಗಲಿಲ್ಲ. ಊರ ಜನ ಬರಲಿರುವ ಚುನಾವಣೆಯ ಬಗ್ಗೆ ಮಾತನಾಡುವುದರಲ್ಲಿ ಮೈಮರೆತಿದ್ದರು. ಅಷ್ಟೇ. ರಸ್ತೆ ಅಗಲ ಮಾಡಲು ಸರಕಾರ ಅನುಮತಿ ನೀಡಿರುವುದು, ಕ್ಷೇತ್ರದ ಎಂ.ಎಲ್.ಎ. ಉತ್ಸಾಹದಿಂದ ಓಡಿಯಾಡುತ್ತಿರುವುದು ಯಾರ ಕಣ್ಣಿಗೂ ಬಿದ್ದಿಲ್ಲ ಅನ್ನುವುದು ನಿಜವಾದ ಸುದ್ದಿಯೇ.

ಅಯ್ಯೋ, ಈ ನಂಜಲವನ್ನ ಕಡಿದು ಹಾಕುತ್ತಾರಂತೆ ಎಂದು ಸಾವಿರದಲ್ಲಿ ಒಂದಿಬ್ಬರು ಮಾತ್ರ ಚಿಂತಿಸುತ್ತಿದ್ದಾರೆ ಎಂಬುದೂ ನಿಜವಾದ ಸುದ್ದಿಯೇ.

ಪ್ರತಿಕ್ರಿಯಿಸಿ: **feedback@sudha.co.in**